ನಾನು ಕಂಡರೂ ಕಾಣದಂತೆ ಹೊರಟು ಹೋಗುತ್ತಿದ್ದ. ಅಂತೂ ವರ್ಷದ ನಂತರ ಅವಳಿಗೆ ವೀಸಾ ಸಿಕ್ಕು ಗಂಡ, ಹೆಂಡತಿ ದುಬೈಗೆ ಹಾರಿದ್ದರು. ನಾನು ಮುದುಡಿ... ಹೋಗಿದ್ದೆ.

ನನಗೂ ಕಂಕಣಬಲ ಕೂಡಿ ಬಂದಿತ್ತು. ಅಪ್ಪ, ಅಣ್ಣ ತಮ್ಮಂತಹ ವರನನ್ನೇ ಹುಡುಕಿದ್ದರು. ಶ್ರೀನಾಥ... ಕೆನರಾ ಬ್ಯಾಂಕಿನ ಉದ್ಯೋಗಿ. ಕೇಶ್ವಾಪೂರದಲ್ಲಿ ಪುಟ್ಟ ಮನೆ. ಒಳ್ಳೆಯ ಸಂಬಂಧ. ಅತ್ತೆ, ಮಾವ ಒಳ್ಳೆಯವರೇ. ಹೊಟ್ಟೆ ತುಂಬ ಊಟ, ತಿಂಡಿಗಳ ವಿಷಯದಲ್ಲೇನೂ ಕೊರತೆ ಇರಲಿಲ್ಲ. ಆದರೆ ಶೋಕಿ ಕೇಳಬೇಡಿ. ಮನೆಯಲ್ಲಿ ನಾಲ್ಕು ಕುರ್ಚಿ, ಒಂದು ಮಂಚದ ವಿನಃ ಮತ್ತೇನಿರಲಿಲ್ಲ. “ಸರಜಕ್ಕ ಭಾಳ ಕೇಳಲಿಕ್ಕತ್ತಾರ. ಒಮ್ಮೆ ನಿಮ್ಮನಿಗೆ ಕರಕೊಂಡು ಬರ್ತೇನಿ” ಎಂದಳು ಅಮ್ಮ. ನಾನು, “ಬ್ಯಾಡವಾ... ಅತ್ತಿ ಮಾವ ಏನಂತಾರೋ ಏನೋ...” ಎಂದು ನಿರಾಕರಿಸಿದ್ದೆ. ಅಸಲಿಗೆ ಸರಜಕ್ಕನ ಮೂಲಕ ಚಂದ್ರುವಿಗೆ ನನ್ನ ಮನೆಯ ವಿಷಯ ತಿಳಿಯುವುದು ಬೇಕಿರಲಿಲ್ಲ. ನಾನೂ ಗತವನ್ನೆಲ್ಲ ಮರೆತು ಶ್ರೀನಾಥರಿಗೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಮಧ್ಯೆ ಅಮ್ಮನ ಮೂಲಕ, “ಚಂದ್ರು ಹೆಂಡ್ತಿನ್ನ ಎಷ್ಟ ಛೊಲೊ ನೋಡಕೋತಾನ. ನಡದರ ಸವೀತಾಳ ಅನ್ನೊಹಾಂಗ... ಅಕಿ ಪುಣ್ಯಾನ ಪುಣ್ಯಾ. ಆರಾಮಿಲ್ಲದಿದ್ರಂತೂ ಅಕಿ ಸೇವಾ ಮಾಡತಾನ” ಎನ್ನುವ ವಿವರಗಳು ದೊರಕಿ ಗಾಯವನ್ನು ಕೆದಕುತ್ತಿದ್ದವು.

> **ಆ ಜಾತಕ ಕೈಗೆತ್ತಿಕೊಂಡು ಪರಪರನೇ ಹರಿದು ಹಾಕಿದೆ. ಸ್ಪರ್ಧೆಗೆ ಬಿದ್ದು ಗುದ್ದಾಡುವ ನೆಂಟಸ್ತಿಕೆ ಬೇಡವೆನಿಸಿತು. ‘ಅವರ ಸಹವಾಸಾನೇ ಬ್ಯಾಡಾ. ಯಾಕಂದ್ರ ಈರ್ಷಾ ಅನ್ನೋದು ಕರೊನಾಕ್ಕಿಂತ ಧೊಡ್ಡ ರೋಗ’ ಎಂದೆ.**

ಆದರೆ ಈ ಮಧ್ಯೆ ನೆನಪಿಡುವಂಥ ಘಟನೆಯೊಂದು ನಡೆದಿತ್ತು. ನಾನು ಬೆಂಗಳೂರಿಗೆ ಅತ್ತೆಮನೆಯ ನೆಂಟರ ಮದುವೆಗೆಂದು ಬಂದವಳು ಕಿತ್ತೂರ್ ಎಕ್ಸ್‌ಪ್ರೆಸ್‌ನಲ್ಲಿ ತಿರುಗಿ ಹುಬ್ಬಳ್ಳಿಗೆ ಹೊರಟಿದ್ದೆ. ಅತ್ತೆ, ಮಾವ ಬಂದು ನನ್ನನ್ನು ರೈಲು ಹತ್ತಿಸಿ... ತಾವು ಕೆಲವು ದಿನ ಅಲ್ಲೇ ಉಳಿದಿದ್ದರು. ಟಿಕೆಟ್ ಅಪ್‌ಗ್ರೇಡಾಗಿ ಫಸ್ಟ್‌ಕ್ಲಾಸಿನಲ್ಲಿ ಬಂದಿತ್ತು. ಹೋಗಿ ಕುಳಿತಾಕ್ಷಣ ಅಚ್ಚರಿಯೆಂಬಂತೆ ಎದುರಿಗೆ ಚಂದ್ರು ಕುಳಿತಿದ್ದ. ಅವನು ಬೆರಗಾಗಿದ್ದರೂ ಅಸಡ್ಡೆಯಿಂದ ನೋಡಿದ್ದ. ನಾನು ಆದಷ್ಟು ಸಹಜವಾಗಿರಲು ಪ್ರಯತ್ನಿಸುತ್ತ ಮಾತನಾಡಿದ್ದೆ. “ಹೆಂಗಿದ್ದೀಯಪಾ? ಬೆಂಗಳೂರಿಗೆ ಬಂದಿದ್ಯಾ?” ಎಂದು ಕೇಳಿದ್ದೆ. “ಹ್ಞೂಂ... ಬೆಂಗಳೂರಾಗ ಒಂದು ಸ್ಯೂಟ್ ತೊಗೊಂಡೆ. ಇನ್ವೆಸ್ಟ್‌ಮೆಂಟ್ ಅಂತ. ರಿಜಿಸ್ಟ್ರೇಷನ್ ಮುಗಿಸಿಕೊಂಡು ಬಂದೆ. ಮುಂದಿನ ವಾರ ದುಬೈಗೆ ಹೋಗಬೇಕು” ಎನ್ನುವ ಮಾತುಗಳು ಠೀವಿಯಿಂದ ಬಂದು ಮುಗಿದುಬಿಟ್ಟಿದ್ದವು. ಮುಖಭಂಗವಾಗಿ ನಾನೂ ಮಲಗಿದೆ. ರಾತ್ರಿಯೆಲ್ಲ ಹಳೆಯ ಚಿತ್ರಗಳು ಮನಃಪಟಲದ ಮೇಲೆ ಓಡಿದ್ದೇ ಓಡಿದ್ದು. ಬೆಳಗ್ಗೆ ಐದೂವರೆಗೆಲ್ಲ ಹುಬ್ಬಳ್ಳಿ ಬಂದಿತ್ತು. ನಾನು ಇಳಿಯಲು ಅನುವಾದಾಗ ತನ್ನ ಹೊದಿಕೆ ರಪ್ಪನೆ ಕಿತ್ತೆಸೆದವ, “ಯಾಕ... ಯಾಕ... ನನ್ನ ಮದವಿ ಮಾಡಕೊಳ್ಳಿಲ್ಲಾ ನೀನು?” ಎಂದು ಆವೇಶದಿಂದ ಕೇಳಿದ್ದ. ನಾನೂ ರಾತ್ರಿಯೆಲ್ಲ ಅದನ್ನೇ ಯೋಚಿಸಿದ್ದ ಪರಿಣಾಮವಾಗಿ ಕೆರಳಿದ್ದೆ. “ತಪ್ಪೆಲ್ಲಾ ನಿಂದ. ಒಂದಿವಸರೇ ಕೈಹಿಡಕೊಂಡು ‘ನಿನ್ನ ಪ್ರೀತಿಸ್ತೇನಿ’ ಅಂದ್ಯಾ? ಯಾರು ಒಪ್ಪದಿದ್ರೂ ನಾವು ಮದಿವ್ಯಾಗೋಣು ಅಂದ್ಯಾ? ನಿನ್ನ ಬಿಟ್ಟು ಬದಕ್ಲಿಕ್ಕಾಗೂದುಲ್ಲಾ ಅಂದ್ಯಾ? ಒಂದು ಪ್ರೀತಿಯ ಸ್ಪರ್ಶ... ತೀವ್ರತೆ... ನಾ ಎಲ್ಲಾ ಬಿಟ್ಟು ಓಡಿಬರೋಹಾಂಗ ಇತ್ತೇನು ನಿನ್ನ ಪ್ರೇಮದಾಗ?” ಎಂದು ಕೋಪದಲ್ಲೇ ಕೇಳಿದ್ದೆ. ತಕ್ಷಣ ಎಂದೂ ಹಿಡಿಯದವ, “ಈಗ ಹೇಳ್ತೇನಿ” ಎಂದು ಕೈ ಹಿಡಿಯಲು ಬಂದ.